ಗೆಲ್ಲಬೇಕಾದರೆ ಶಿಕ್ಷಣದಿಂದ ಮಾತ್ರ ಎಂದು ಭಾವಿಸಿ ದುರಂತವಾಗುವ ಯುವಕ; ಹೊಸ ತಲೆಮಾರು ಜಾತಿಯನ್ನು ಮೀರಿ ದೇಹ ಸಂಕರಗೊಂಡರೂ ಊರು ಬಿಡುವುದು, ಇತ್ಯಾದಿ ವಿವರಗಳನ್ನು 'ಬ್ಯಾಟೆಮರ' ಒಳಗೊಂಡಿದೆ. ಇವರ ಕಥೆಗಳಲ್ಲಿ ಹೆಣ್ಣಿನ ದಾರಿಗಳು ಸಾಕಷ್ಟು ಮಾಗಿವೆ. ಅವರು ಬಳಸುವ ಭಾಷೆ, ಅವರ ಬದುಕನ್ನೂ ಗೆಲ್ಲಿಸಿದೆ. ತೀರ ಹಳೆಯ ಚಿತ್ರಗಳನ್ನೇ ಹೇಳುವ ಧಾಟಿ ಇದ್ದರೂ ಕೆಲವು ತಿರುವುಗಳಲ್ಲಿ ಪಾತ್ರಗಳು ಭಿನ್ನ ಮುಖ ಧರಿಸುತ್ತವೆ. ಇಡೀ ಸಂಕಲನದಲ್ಲಿ 'ದೇವಿ' ಎಂಬ ಕಥೆ ಹೆಣ್ಣಿನ ನಿಜವಾದ ಶಕ್ತಿಯನ್ನು ತೋರಿಸುತ್ತದೆ. ನಿರೂಪಣೆಯಲ್ಲಿ ಮೌಖಿಕ ವಸ್ತುವನ್ನು 'ಸದ್ಯ'ಕ್ಕೆ ಒಗ್ಗಿಸಿ ನೋಡುವ ಕ್ರಮದಲ್ಲಿ ಕಥೆಯ ಶಕ್ತಿ ಅಡಗಿದೆ. ದಯಾ ಗಂಗನಘಟ್ಟ ಅವರ 'ಜಗತ್ತಿನ ಸ್ವಲ್ಪ ಆ ಕಡೆಗೆ' ಕಥೆಗಿಂತ ಬೇರೆತರದ ಸೂಕ್ಷ್ಮತೆಗಳನ್ನು 'ದೇವಿ' ಕಥೆ ಒಳಗೊಂಡಿದೆ. ಬಯಲು ಶೌಚಾಲಯ ಊರಿನ ಆತ್ಮವೇ. ಆದರೆ ಅದನ್ನು ದಯಾ ಅವರು ಮತ್ತು ಶಶಿ ಅವರು ಒಂದು ಸಾಮಾಜಿಕ ವ್ಯವಸ್ಥೆಯ ಆವರಣಕ್ಕೆ ತರುತ್ತಾರೆ. ಊರ ಒಳಗಣ ಮನುಷ್ಯರ ಸತ್ಯಗಳಿಗೂ, ಹೊರಗಣ ಬಯಲು ಹೊರಡಿಸುವ ಘೋರ ಸತ್ಯಗಳಿಗೂ ವ್ಯತ್ಯಾಸಗಳನ್ನು ಮಾರ್ಮಿಕವಾಗಿ ಹಿಡಿದಿದ್ದಾರೆ. ಇಂಥ ವಿಚಾರಗಳನ್ನು ತೀರಾ ಸೈದ್ಧಾಂತಿಕವಾಗಿ ನೋಡಿದರೆ ಸಾಕಷ್ಟು ನೆರವು ಸಿಗದು. ದೇವಿ ಕಥೆಯಲ್ಲಿ ಜನಪದ ಕಥೆಯನ್ನು ವರ್ತಮಾನದಲ್ಲೇ ಹೇಳುತ್ತಲೇ ಅದೇ ಕಥೆಯನ್ನು ಮುರಿಯುವ ರೀತಿಯಲ್ಲೇ ಹೆಣ್ಣಿನ ಶಕ್ತಿ ಇದೆ; ತತ್ವವೂ ಇದೆ. ನಾರಾಯಣಿ ಎಂಬ ಮಂತ್ರವಾದಿ ಮಾಟಮಂತ್ರಗಳಿಗೆ ಬಯಲನ್ನು ಆರಿಸಿಕೊಳ್ಳುವ ವಿಚಾರದಲ್ಲೇ 'ಗಂಡಿನ' ಒಳಕ್ರೌರ್ಯಗಳಿವೆ. ದ್ಯಾವಕ್ಕ ಹೇಳುವ ಬಕಾಸುರನ ಕಥೆ, ಇಡೀ ಸನ್ನಿವೇಶವನ್ನೇ ಬದಲಿಸಿಬಿಡುತ್ತದೆ. ಒಬ್ಬ ಕಾಮುಕ ರಾಕ್ಷಸನಿಗೆ ಪ್ರತಿರಾತ್ರಿ ಗಂಡಸರು ತಮ್ಮ ಹೆಂಡಿರನ್ನು ಕಳಿಸುವ ಜವಾಬ್ದಾರಿ ಹೊತ್ತಿದ್ದರು. ಸದ್ಯಕ್ಕೆ ಆ ರಾಕ್ಷಸನ ರೂಪದಲ್ಲಿ ನಾರಾಯಣಿ ಕಾಣುತ್ತಿರುವಾಗಲೇ ದ್ಯಾವಮ್ಮ ಆತನನ್ನು 'ಹೊಡೆ'ಯುತ್ತಾಳೆ. ಹಸಿಗಾಯ ಹಾಗೇ ಇರುತ್ತೆ. ಇಡೀ ಊರಿನ ಗಂಡಸರ ಮೌಢ್ಯವನ್ನು ಸೀಳುವ ಶಕ್ತಿ ಹೆಣ್ಣುಮಕ್ಕಳಿಗೆ ಬಂದು ಬಿಡುತ್ತೆ. ಗ್ರಾಮದ ಹೆಣ್ಣಿನ ನಿಜದ ಪರಿವರ್ತನೆ ಇಲ್ಲಿ ಕಾಣಬಹುದು; ಇದೇ ದೊಡ್ಡ ತತ್ವ. ಬಹುಶಃ ಬಕಾಸುರ ಕಾಮುಕನಾಗಿರಲಿಲ್ಲ, ಆದರೆ ನಾರಾಯಣಿ ಅಂತ ಗಂಡಸರಿಗೆ ಕಾಮುಕತನವೇ ಮುಖ್ಯವಾಗಿದೆ. ಶಶಿಕುಮಾರ್ ಅವರು ಭಾಷಿಕವಾಗಿ ಆರಿಸಿಕೊಂಡಿರುವ ದಾರಿ ಕೆಲವರಿಗೆ ಕುತೂಹಲವಿರಬಹುದು. ದೇಸಿ ನುಡಿಯಲ್ಲಿ ಕಥೆ ಹೆಣೆಯುವ ದಾರಿ ಹಳೆಯದೇ ಆಗಿದೆ. ಈ ದಾರಿಯನ್ನು ಪ್ರಯೋಗಕ್ಕೆ ಒಡ್ಡದೇ ಹೋದರೂ ಕಷ್ಟವೇ. ಮಾತು, ಕಥೆಯಾಗುವ ಪ್ರಕ್ರಿಯೆಯಲ್ಲಿ ನಿರೂಪಕ ಹಲವು ಎಚ್ಚರಗಳನ್ನು ವಹಿಸಬೇಕಾಗುತ್ತದೆ. ಮಾತುಗಳು ವಸ್ತುವಿನ ಬಲವನ್ನು ಹೆಚ್ಚಿಸಬೇಕೆ ಹೊರತು, ಜಾರಿಕೆಯ ಗುಣ ಹೊಂದಬಾರದು. ಇವರ ಹಿಂದಿನ ತಲೆಮಾರಿನ ಸಂತೋಷ್ ಗುಡ್ಡಿಯಂಗಡಿ ಇದೇ ದಾರಿಯನ್ನು ಆರಿಸಿಕೊಂಡು ಮುಂದೆ ಸವಾಲುಗಳನ್ನು ಎದುರಿಸಿದ್ದು ತಿಳಿದಿದೆ. ಶಶಿಕುಮಾರ್ ಅವರು ಕೂಡ ಹಲವು ಕಥೆಗಳಲ್ಲಿ ರಚನೆಯ ಬಗ್ಗೆ ಯೋಚಿಸಲಾರರು. ಯಾವ ಘಟನೆಯನ್ನು ಹೇಗೆ ತರಬೇಕು? ಯಾವ ವಿವರಗಳನ್ನು ಎಷ್ಟು ತರಬೇಕು? ಎಂಬುದರ ಕುರಿತು ಯೋಚಿಸಬೇಕು. ಹಾಗಾಗಿಯೇ ಇವರು ಕೂಡ ಅನೇಕ ಕಥೆಗಾರರಂತೆ ಧಾರಾವಾಹಿ ತಂತ್ರಕ್ಕೆ ಮರಳುತ್ತಾರೆ. ಈ ತಂತ್ರ ಕಥೆಯ ಗಟ್ಟಿತನವನ್ನು ದಿಕ್ಕುತಪ್ಪಿಸುತ್ತದೆ; ಇಲ್ಲವೇ ಅನಗತ್ಯ ಮಾತುಗಳೇ ಮುನ್ನೆಲೆಗೆ ಬರುತ್ತವೆ.



ಸಿನಿಮಾ ಜಗತ್ತಿನ ಬದುಕನ್ನು ಕಥೆಗಳ ಹೂರಣಕ್ಕೆ ಬಳಸಿಕೊಳ್ಳುತ್ತಿರುವ ಪ್ರವೀಣ್ ಕುಮಾರ್ ಜಿ. ಭಾಷೆಯನ್ನು ಅಚ್ಚುಕಟ್ಟಾಗಿ ಹೆಣೆಯಬಲ್ಲರು. ಸಿನಿಮಾ ಮನುಷ್ಯರು, ಶೂಟಿಂಗ್ ಮತ್ತು ಭಿನ್ನ ಮನಸ್ಥಿತಿಗಳು ಅವರ ಕಥೆಗಳಲ್ಲಿ ಗರಿಗೆದರಿವೆ. ಹಳ್ಳಿಯ ಮುಗ್ಧ ಜೀವಗಳು ಮತ್ತು ಸಿನಿಮಾ ಜಗತ್ತಿನ ಒಳಲೋಕ ಇವುಗಳ ಸಂಬಂಧದಲ್ಲಿನ ಸತ್ಯಗಳನ್ನು ಹುಡುಕುತ್ತಾರೆ. ಈ ಕ್ರಮ ವಸ್ತು ವೈವಿಧ್ಯವನ್ನೇನೋ ತೋರಿಸಬಹುದು, ಆದರೆ ಗಟ್ಟಿಯಾದ ತಳಹದಿ ಹಿಡಿಯಬೇಕಾಗುತ್ತದೆ. 'ಎಡೆ', 'ಹನುಮಜ್ಜನ ಸಿನಿಮಾ ಕಥೆ', 'ಉಡ' ಈ ಕಥೆಗಳು ಮನುಷ್ಯನ ಒಳತೋಟಿಯನ್ನು ಹಿಡಿಯಲು ಪ್ರಯತ್ನಿಸಿವೆ. 'ಎಡೆ' ಕಥೆ ಸ್ಮಶಾನದಲ್ಲಿ ಅರಳಿ ಅಲ್ಲೇ ಕೊನೆಯಾಗುತ್ತದೆ. ಏಕಕಾಲಕ್ಕೆ ಸಾವಿನ ದರ್ಶನ,